# ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿ.ದಾ.ಚಿ.ಸಹಾಒ/ಮಾರುಕಟ್ಟೆ/ಟೆಂಡರ್–1/9869/2014–15 **ದಿನಾಂಕ: 27.03.2015**

**–: *ಸಾರಿಗೆ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು***
***ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ*** **:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಒಕ್ಕೂಟದ ಮೂರು ಜಿಲ್ಲೆಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನ ವಿತರಣೆ ಮಾಡಲು ವಿವಿಧ ಸಾಮರ್ಥ್ಯದ ವಾಹನಗಳನ್ನು ಮತ್ತು ದಾವಣಗೆರೆ, ಚಿತ್ರದುರ್ಗ ಮಾರುಕಟ್ಟೆ ಕ್ಷೇತ್ರ ಕೆಲಸಕ್ಕೆ ಮತ್ತು ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಕ್ಷೀರ ಭಾಗ್ಯ ಯೋಜನೆ ಕೆಲಸಕ್ಕೆ ದ್ವೈವಾರ್ಷಿಕ ಅವಧಿಗೆ ಕಾರನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ದರ ಹೊಂದಿದ ಪ್ರತ್ಯೇಕ ಟೆಂಡರ್ ಕರೆಯಲಾಗಿದ್ದು, ವಾಹನಗಳನ್ನು ಹೊಂದಿರುವ ಮಾಲೀಕರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 10.04.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 27.04.2015 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **30.04.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: **02.05.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 5 | **ಅವಶ್ಯವಿದ್ದಲ್ಲಿ ದರ ಸಂಧಾನ ಮಾಡುವ ದಿನಾಂಕ** | ದಿನಾಂಕ: **04.05.2015** ರಂದು ಬೆಳಿಗ್ಗೆ: **11.00** ಗಂಟೆಗೆ |

**I. ಈ ಕೆಳಗೆ ನಮೂದಿಸಿರುವ ಹಾಲು ವಿತರಣಾ ಮಾರ್ಗಗಳಿಗೆ ಹಾಲು/ಉತ್ಪನ್ನಗಳನ್ನು ವಿತರಿಸಲು Insulation ಕವಚವನ್ನು ಹೊಂದಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ 2010 ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ವಾಹನ ಒದಗಿಸಲು 02 ವರ್ಷದ ಅವಧಿಗೆ ಗುತ್ತಿಗೆ ಕರೆಯಲಾಗಿದೆ. ಪ್ರತಿ ಕಿ.ಮೀ. ದರ ನಮೂದಿಸುವುದು. (ಹಾಲು ವಿತರಣಾ ವಾಹನಕ್ಕೆ Insulation ಕವಚವನ್ನು ಎನ್.ಡಿ.ಡಿ.ಬಿ ಸ್ಪೆಸಿಫಿಕೇಶನ್ ಪ್ರಕಾರ ನಿರ್ಮಿಸಿಕೊಳ್ಳಬೇಕು) SMU/MKT/TENDER/2014-15/1/001**

| ಮಾರ್ಗದ ಸಂಖ್ಯೆ | ಹಾಲು ವಿತರಣಾ ಮಾರ್ಗದ ಹೆಸರು/ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ | ವಾಹನ ಸಾಮರ್ಥ್ಯ/ 12 ಲೀ. ಸಾಮರ್ಥ್ಯದ ಹಾಲಿನ ಕ್ರೇಟುಗಳು | ದಿನದ ಅಂದಾಜು ಅಂತರ ಕಿ.ಮೀ | ಇ.ಎಂ.ಡಿ ರೂ.ಗಳಲ್ಲಿ | ಭದ್ರತಾ ಠೇವಣಿ ರೂ.ಗಳಲ್ಲಿ |
|---|---|---|---|---|---|
| 1 | **ಚಿತ್ರದುರ್ಗ– 4 ನೇ ಮಾರ್ಗ:–** ಶಿವಮೊಗ್ಗ ಡೈರಿಯಿಂದ ಭದ್ರಾವತಿ, ಚನ್ನಗಿರಿ, ಹೊಳಲ್ಕೆರೆ ತಾಲ್ಲೂಕುಗಳ ಹಾಗೂ ಚಿತ್ರದುರ್ಗ ನಗರದ ಸ್ಥಳಗಳಿಗೆ ಹಾಲು ಮತ್ತು ಹಾಲು ಉತ್ಪನ್ನಗಳನ್ನು ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | 6.5 M.T (500 ಕ್ರೇಟ್) | 232 ಕಿ.ಮೀ | 25,000/– | 2,50,000/– |
| 2 | **ಹೊಸದುರ್ಗ–ಶ್ರೀರಾಂಪುರ ಮಾರ್ಗ:–** ಹೊಸದುರ್ಗದಿಂದ ಬೆಲಗೂರು, ಗರಗ, ಶ್ರೀರಾಂಪುರ ಸ್ಥಳಗಳಿಗೆ ಹಾಲು ಮತ್ತು ಹಾಲು ಉತ್ಪನ್ನಗಳನ್ನು ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಹೊಸದುರ್ಗ ಮಾರ್ಗದ ಗುತ್ತಿಗೆದಾರರಿಗೆ ಜಮಾ ಮಾಡುವುದು. | ಗೂಡ್ಸ್ ಆಟೋ/ ಅಪೇ ಆಟೋ | 80 ಕಿ.ಮೀ | 25,000/- | 50,000/- |
| 3 | **ನಗರ–ಸಿಗಂದೂರು ಮಾರ್ಗ:–** ನಗರದಲ್ಲಿ ಮಾಸ್ತಿಕಟ್ಟೆ ಮಾರ್ಗದಿಂದ ಹಾಲು ಮತ್ತು ಉತ್ಪನ್ನಗಳನು ಪಡೆದು ಸಂಪೆಕಟ್ಟೆ, ನಿಟ್ಟೂರು, ತುಮರಿ, ಸಿಗಂದೂರು ಪ್ರದೇಶಗಳಿಗೆ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ನಗರದಲ್ಲಿ ಮಾಸ್ತಿಕಟ್ಟೆ ಮಾರ್ಗದ ಗುತ್ತಿಗೆದಾರರಿಗೆ ಜಮಾ ಮಾಡುವುದು. | 1.5 M.T | 130 ಕಿ.ಮೀ | 25,000/- | 1,00,000/- |
| 4 | **ದಾವಣಗೆರೆ ಡೇ–ಕೌಂಟರ್ ಬೆಳಗ್ಗೆ ಮಾರ್ಗ:–** ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ದಾವಣಗೆರೆ ನಗರದ ಡೀಲರ್‌ಗಳು/ಕಲ್ಯಾಣ ಮಂಟಪಗಳು/ಡೇ–ಕೌಂಟರ್ ಅಂಗಡಿಗಳಿಗೆ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ನೀಡುವುದು. | 1.5 M.T | 45 ಕಿ.ಮೀ | 25,000/- | 1,00,000/- |

| | | | | | |
|---|---|---|---|---|---|
| 5 | **ದಾವಣಗೆರೆ ಚಿತ್ರದುರ್ಗ ಬೆಳಗ್ಗೆ ಮಾರ್ಗ** –ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಚಿತ್ರದುರ್ಗ ನಗರದ ಡೀಲರ್/ಎ.ಟಿ.ಎಂ. ಪಾರ್ಲರ್‌ನ ವಾಕ್–ಇನ್–ಕೋಲ್ಡ್‌ಸ್ಟೋರ್‌ಗೆ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ನೀಡುವುದು. | 2.5 M.T | 160 ಕಿ.ಮೀ | 25,000/- | 1,50,000/- |
| 6 | **ಹುಚ್ಚಂಗಿ ದುರ್ಗ ಮಾರ್ಗ:**–ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಅಣಜಿ, ಹುಚ್ಚಂಗಿದುರ್ಗ, ಅರಸಿಕೆರೆ ಹಾಗೂ ಕೆಲವು ಗ್ರಾಮಾಂತರ ಪ್ರದೇಶದ ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ಪಾವತಿಸುವುದು. | ಮ್ಯಾಕ್ಸ್ ಪಿಕಪ್/ ಟಾಟಾ ಏಸ್ | 96 ಕಿ.ಮೀ | 10,000/- | 75,000/- |
| 7 | **ಹೊಳಲ್ಕೆರೆ–ಹೊಸದುರ್ಗ ಮಾರ್ಗ:–** ಶಿವಮೊಗ್ಗ ಡೈರಿಯಿಂದ ಹಾಲುಮತ್ತು ಹಾಲು ಉತ್ಪನ್ನಗಳನ್ನು ಪಡೆದು ಚನ್ನಗಿರಿ, ಹೊಳಲ್ಕೆರೆ ಹೊಸದುರ್ಗಗಳಲ್ಲಿ ಡೀಲರ್‌ಗಳಿಗೆ ವಿತರಣೆ ಮಾಡುವುದು ಮತ್ತು ನಗದನ್ನು ಸಂಗ್ರಹಿಸಿ ಒಕ್ಕೂಟದಲ್ಲಿ ಜಮಾ ಮಾಡುವುದು. | 6.5 M.T (500 ಕ್ರೇಟ್) | 225 ಕಿ.ಮೀ | 25,000/- | 2,00,000/- |

**II. ಈ ಕೆಳಕಂಡ ಕಚೇರಿ ಕೆಲಸ /ಮಾರುಕಟ್ಟೆ ಮಾರ್ಗಗಳಿಗೆ 2012 ರ ಅಥವಾ ನಂತರದ ಸಾಲಿನ ಮಾದರಿಯ ಹಳದಿ ಬೋರ್ಡ್ ಹೊಂದಿರುವ ಟಾಟಾ ಇಂಡಿಕಾ ಕಾರುಗಳನ್ನು ಒದಗಿಸಲು ಗುತ್ತಿಗೆ ಕರೆಯಲಾಗಿದೆ. ಪ್ರತಿ ಕಿ.ಮೀಗೆ ದರ ನಮೂದಿಸುವುದು. ಗುತ್ತಿಗೆ ಅವಧಿ–02 ವರ್ಷ ಅಥವಾ ಒಕ್ಕೂಟದ ಅವಶ್ಯಕತೆ ಇರುವವರೆಗೆ ಮಾತ್ರ ವಾಹನ ಉಪಯೋಗಿಸಲಾಗುವುದು.**

**SMU/MKT/TENDER/2014-15/1/002**

| ಮಾರ್ಗದ ಸಂಖ್ಯೆ | ಮಾರುಕಟ್ಟೆ/ಕ್ಷೇತ್ರ ಮಾರ್ಗದ ಹೆಸರು | ವಾಹನ ಮಾದರಿ | ಮಾಸಿಕ ಕನಿಷ್ಠ ಅಂತರ | ಇ.ಎಂ.ಡಿ ರೂ.ಗಳಲ್ಲಿ | ಭದ್ರತಾ ಠೇವಣಿ ರೂ.ಗಳಲ್ಲಿ |
|---|---|---|---|---|---|
| 8 | ಕ್ಷೀರ ಭಾಗ್ಯ ಯೋಜನೆ ದಾವಣಗೆರೆ ಮತ್ತು ಚಿತ್ರದುರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 9 | ಚಿತ್ರದುರ್ಗ ಮಾರುಕಟ್ಟೆ ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 10 | ದಾವಣಗೆರೆ ಮಾರುಕಟ್ಟೆ ಮಾರ್ಗ ದಾವಣಗೆರೆ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |

## ನಿಬಂಧನೆ ಮತ್ತು ಷರತ್ತುಗಳು

1. **ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು.**
2. **ಇ–ಪ್ರೊಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**
3. **ಕನಿಷ್ಠ ಇ.ಎಂ.ಡಿ. ರೂ. 10,000/– ಆದರೆ ವಿತರಣೆ ಸಾಗಾಣಿಕೆ ಮಾರ್ಗದ ವಾಹನಗಳಿಗೆ, ಟಾಟಾ ಏಸ್ / ಮ್ಯಾಕ್ಸ್ ಪಿಕ್‌ಅಪ್ ವಾಹನಗಳಿಗೆ/ ಕಾರುಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ವಿತರಣೆ ವಾಹನಕ್ಕೆ ಹಾಗೂ ಕಾರುಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ವಿತರಣಾ ವಾಹನಗಳು 2010 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಟಾಟಾ ಇಂಡಿಕಾ ಕಾರುಗಳು ಹಳದಿ ಬೋರ್ಡ್ ಹೊಂದಿದ್ದು 2012 ರ ಅಥವಾ ನಂತರದ ಮಾಡೆಲ್ ಆಗಿರಬೇಕು. ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
6. ಕ್ರ.ಸಂ 2 ರ ಹೊಸದುರ್ಗ ಶ್ರೀರಾಂಪುರ ಮಾರ್ಗಕ್ಕೆ ಹಾಲಿನ ಬೇಡಿಕೆ ಹೆಚ್ಚಾಗಿ ಅಧಿಕ ಸಾಮರ್ಥ್ಯದ ವಾಹನದ ಅಗತ್ಯವಿರುವುದು ಕಂಡುಬಂದಲ್ಲಿ 60 ದಿನಗಳ ಮುಂಚಿತ ನೋಟಿಸ್ ನೀಡಿ ಗುತ್ತಿಗೆ ರದ್ದು ಪಡಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.
7. ಹಾಲು ವಿತರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ವಿತರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು.

**8.** ಹಾಲು ವಿತರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.

**9.** ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.

**10.** ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.

**11.** ಹಾಲು ವಿತರಣಾ ಮಾರ್ಗದ ಗುತ್ತಿಗೆದಾರರು ಹಾಲು ಮತ್ತು ಹಾಲಿನ ಉತ್ಪನ್ನಗಳ ಒಟ್ಟು ಮೊತ್ತವನ್ನು ಆಯಾ ದಿನವೇ ನಿಗಧಿತ ವೇಳೆಗೆ ಕಚೇರಿ/ಬ್ಯಾಂಕಿಗೆ ಪಾವತಿಸುವುದು. ಪೂರ್ಣ ಮೊತ್ತ ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ ಮೊದಲ ದಿನ ಹಾಗೂ 2 ನೇ ದಿನದ ಬಾಕಿ ಮೊತ್ತಕ್ಕೆ ಶೇ 2% ರಷ್ಟು ದಂಡದ ಮೊತ್ತವನ್ನು 3 ನೇ ದಿನಕ್ಕೆ ಪಾವತಿಸುವುದು. 3 ನೇ ದಿನವೂ ಬಾಕಿ ಉಳಿಸಿಕೊಂಡಲ್ಲಿ ದಿನದ ಬಾಕಿ ಮೊತ್ತಕ್ಕೆ ಶೇ 3% ರಷ್ಟು ಬಡ್ಡಿ ಸೇರಿಸಿ ಪಾವತಿಸತಕ್ಕದ್ದು ಮತ್ತು ನಂತರವೂ ಪಾವತಿಸದಿದ್ದಲ್ಲಿ ಒಕ್ಕೂಟದ ನಿಯಮಾನುಸಾರ ಗುತ್ತಿಗೆ ರದ್ದುಪಡಿಸಲು ಕ್ರಮವಿಡಲಾಗುವುದು.

**12.** ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಮಾರುಕಟ್ಟೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 27.03.2015
ಸ್ಥಳ : ಮಾಚೇನಹಳ್ಳಿ